ಓ.ಎಸ್. ನಂ.65/2020
ಪಿ. ಡಬ್ಲ್ಯೂ - 1

<u>ದಿನಾಂಕಃ **06-01-2025**</u>

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : **2** ಮತ್ತು **3** ನೇ ಪ್ರತಿವಾದಿಯರ ಪರ ವಕೀಲರಾದ ಶ್ರೀ.ಎಸ್.ಬಿ.ಪಿ. ರವರಿಂದಃ

ಸರ್ವೆ ನಂಃ 118 ರ ಕುರಿತು ದಾವೆಯನ್ನು ಸಲ್ಲಿಸಿರುತ್ತೇನೆ. ಸರ್ವೆ ನಂಃ 118 ರಲ್ಲಿ ಕೇವಲ ಒಂದು ಹಿಸ್ಸಾ ಮಾತ್ರ ಇರುತ್ತದೆ ಸರ್ವೆ ನಂಃ 118 ರಲ್ಲಿ 118 ಅ ಮತ್ತು 118 ಆ ಹೀಗೆ ಎರಡು ಹಿಸ್ಸೆಗಳು ಇರುತ್ತವೆ ಎಂದರೆ ಸರಿ. ಸರ್ವೆ ನಂಃ 118 ಅ ದಲ್ಲಿ 1 ಎಕರೆ 26 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ಸರ್ವೆ ನಂಃ 118 ಆ ದಲ್ಲಿ 1 ಎಕರೆ 26 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ಸರ್ವೆ ನಂಃ 118 ರಲ್ಲಿ ಒಂದೇ ಹಿಸ್ಸೆ ಇರುವುದಿಲ್ಲ ಎರಡು ಹಿಸ್ಸೆಗಳು ಇರುತ್ತವೆ ಎಂದರೆ ಸರಿ. ಸರ್ವೆ ನಂಃ 118 ಅ ದಲ್ಲಿ ಇರುವ ಜಮೀನು ಸಣ್ಣ ತಿಪ್ಪಯ್ಯ ರವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅದು ನನ್ನ ತಂದೆಯವರ ಹೆಸರಿನಲ್ಲಿ ಇರುತ್ತದೆ ಎಂದು ಹೇಳುತ್ತಾರೆ. ಸರ್ವೆ ನಂಃ 118 ಆ ದಲ್ಲಿ ಇರುವ ಜಮೀನು ದೊಡ್ಡ ತಿಪ್ಪಯ್ಯ ರವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅದು ನನ್ನ ತಂದೆಯವರ ಹೆಸರಿನಲ್ಲಿ ಇರುತ್ತದೆ ಎಂದುಹೇಳುತ್ತಾರೆ. ಸದರಿ ಸರ್ವೆ ನಂಬರಗಳು ನನ್ನ ತಂದೆಯವರ ಹೆಸರಿನಲ್ಲಿ ಇರಾದೇ ಇದ್ದರು ಸಹ ಇರುತ್ತವೆ ಎಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. 1 ಮತ್ತು 2 ನೇ ವಾದಿಯರು ಅಣ್ಣ-ತಂಗಿ ಇರುವುದಿಲ್ಲ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯು ನನಗೆ ಯಾವುದೇ ರೀತಿಯ ಸಂಬಂದವನ್ನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರು ನನ್ನ ತಾಯಿ ಆಗಬೇಕು ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಯು ಸಂಬ್ರ ಗ್ರಾಮದವಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ 1 ನೇ ಪ್ರತಿವಾದಿಯು ಸಂಬ್ರ ಗ್ರಾಮದಲ್ಲಿ ವಾಸವಾಗಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಯು ಮೊದಲು ಮೀರನಸಾಬ್ ತಂದೆ ಬಾಡೇ ಸಾಬ್ ರವರ ಮಾಲೀಕಿ ಮತ್ತು ಕಬ್ಜೆಯಲ್ಲಿ ಇತ್ತು ಎಂದರೆ ಸರಿ. ಮೀರನಸಾಬ್‌ನು ಮೃತಪಟ್ಟಾಗ ಆತನಿಗೆ ಯಾರು

ವಾರಸುದಾರರು ಇರಲಿಲ್ಲ ಎಂದರೆ ಸಾಕ್ಷಿಯು ನನ್ನ ತಾಯಿ ಇದ್ದರು ಎಂದು ಹೇಳುತ್ತಾರೆ. ಮೀರನಸಾಬ್ ಮೃತಪಟ್ಟಾಗ ನನ್ನ ತಾಯಿ ಮತ್ತು ನಾವು ಯಾರು ವಾರಸುದಾರರು ಇರಲಿಲ್ಲ ಎಂದರೆ ಸರಿಯಲ್ಲ. ಮೀರನಸಾಬ್ ಮೃತಪಟ್ಟಾಗ ಆತನಿಗೆ ನಾವೇ ವಾರಸುದಾರರು ಇರುತ್ತೇವೆ ಎಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನಾವು ಜಂಟಿಯಾಗಿ ಸಾಗುವಳಿ ಮಾಡುತ್ತಿದ್ದೇವು ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂಃ 118 ರಲ್ಲಿ ಹಿಸ್ಸೆಗಳು ಆಗಿರುವುದಿಲ್ಲ ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಮೀರನಸಾಬ್ ನು ಜೀವಂತ ಇದ್ದಾಗ ನಾವು ಸಂಬ್ರ ಗ್ರಾಮಕ್ಕೆ ಬಂದು ಹೋಗಿ ಮಾಡುತ್ತಿದ್ದೇವು ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯು ಆಂಧ್ರ ಪ್ರದೇಶ ರಾಜ್ಯದ ಉಡುಮಾಳ್ ಗಿದ್ದ ಗ್ರಾಮದಲ್ಲಿ ವಾಸವಾಗಿರುತ್ತಾಳೆ ಎಂದರೆ ಸರಿ. 1 ನೇ ಪ್ರತಿವಾದಿಯು ಸಂಬ್ರ ಗ್ರಾಮಕ್ಕೆ ಬಂದು ಹೋಗಿ ಮಾಡುತ್ತಿದ್ದರು ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಮೀರಸಾಬ್ ಮೃತಪಟ್ಟಾಗ ದಾವಾ ಆಸ್ತಿಗಳನ್ನು ಯಾರು ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿಯು ನಾವು ಬಂದು ಹೋಗಿ ನೋಡಿಕೊಳ್ಳುತ್ತಿದ್ದೇವು ಎಂದು ಹೇಳುತ್ತಾರೆ. ನಾವೇ ದಾವಾದ ಆಸ್ತಿಗಳನ್ನು ನೋಡಿಕೊಳ್ಳುತ್ತಿದ್ದೇನೆಂದು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ದಾವಾದ ಆಸ್ತಿಗಳ ಬೆಳೆಗಳನ್ನು ನಾವು ಪಡೆದುಕೊಳ್ಳುತ್ತಿರಲಿಲ್ಲ ಎಂದರೆ ಸರಿ.

ನಮ್ಮ ಮನೆತನದಲ್ಲಿ ಹೆಚ್ಚಿನ ಜನರು ಆಗಿದ್ದ ಕಾರಣ 1 ನೇಪ್ರತಿವಾದಿಯ ಬಳಿ ಹೋಗಿ ನಮ್ಮಗೆ ಪಾಲು ನೀಡಬೇಕೆಂದು ನಾವು ಕೇಳಿಕೊಂಡಿದ್ದೇವು ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ದಾವಾದ ಆಸ್ತಿಯಲ್ಲಿ ಪಾಲು ಇರುವುದಿಲ್ಲ ಎಂದು ಹೇಳಿದ್ದರು ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. 1 ನೇಪ್ರತಿವಾದಿಗೆ ಯಾವಾಗ ಪಾಲು ಬೇಕು ಎಂದು ನೀವು ಕೇಳಿರುತ್ತೀರಿ ಎಂದರೆ ಸಾಕ್ಷಿಯು ಸುಮ್ಮನೆ ಇರುತ್ತಾರೆ. ನೀವು ಸಂಬ್ರ ಗ್ರಾಮದಲ್ಲಿ ವಾಸ ಇರುವುದಿಲ್ಲ ಎಂದರೆ ಸಾಕ್ಷಿಯು ಬಂದು ಹೋಗಿ ಮಾಡುತ್ತೇವೆ ಎಂದು ಹೇಳುತ್ತಾರೆ.

ಕಳೆದ 2 ವರ್ಷಗಳ ಹಿಂದೆ ದಾವಾ ಆಸ್ತಿಯ ಪಹಣಿ ಪತ್ರಿಕೆಗಳನ್ನು ನಾನು ನೋಡಿರುತ್ತೇನೆ. ಆವಾಗ ಪಹಣಿ ಪತ್ರಿಕೆಗಳಲ್ಲಿ ನನ್ನ ತಂದೆ ಮತ್ತು ತಾತನ ಹೆಸರು ಇತ್ತು. ಎಷ್ಟನೇಯ ವರ್ಷದ ಪಹಣಿ ಪತ್ರಿಕೆಯಲ್ಲಿ ನಿಮ್ಮ ತಂದೆ ಮತ್ತು ತಾತನ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿಯು ನನಗೆ ನೆನಪಿರುವುದಿಲ್ಲ ಎಂದು ಹೇಳುತ್ತಾರೆ. ನಾನು ಪಹಣಿ ಪತ್ರಿಕೆಯನ್ನು ನೋಡಿದಾಗ ಅದರಲ್ಲಿ ಕೇವಲ ಒಂದೇ ಹಿಸ್ಸೆ ಇತ್ತು. ಬಹಳ ದಿನಗಳಿಂದ ದಾವಾ ಆಸ್ತಿಯ ಪಹಣಿ ಪತ್ರಿಕೆಯಲ್ಲಿ ಸಣ್ಣ ತಿಪ್ಪಯ್ಯ ಮತ್ತು ದೊಡ್ಡ ತಿಪ್ಪಯ್ಯ ರವರ ಹೆಸರಿನಲ್ಲಿ ಇರುತ್ತವೆ ಎಂದರ ಸಾಕ್ಷಿಯು ಅವರು ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಸಣ್ಣ ತಿಪ್ಪಯ್ಯ ಮತ್ತು ದೊಡ್ಡ ತಿಪ್ಪಯ್ಯ ರವರು ಪಹಣಿ ಪತ್ರಿಕೆಯಲ್ಲಿ ದಾಖಲಿಸಿಕೊಂಡ ಹಕ್ಕು ಬದಲಾವಣೆಯನ್ನು ನಾನು ಎಲ್ಲಿಯು ಸಹ ಪ್ರಶ್ನಿಸಿರುವುದಿಲ್ಲ ಎಂದರೆ ಸರಿ. ಸಣ್ಣ ತಿಪ್ಪಯ್ಯ ಮತ್ತು ದೊಡ್ಡ ತಿಪ್ಪಯ್ಯ ಹೆಸರುಗಳು ಪಹಣಿ ಪತ್ರಿಕೆಯಲ್ಲಿ ಕಾನೂನು ಬದ್ದವಾಗಿ ದಾಖಲು ಆಗಿರುತ್ತವೆ ಎಂದರೆ ಸರಿಯಲ್ಲ.

ದಿನಾಂಕಃ 29.07.2020 ರಂದು ತಹಶೀಲ್ದಾರ ರವರಿಗೆ ಅರ್ಜಿ ನೀಡಿದ್ದೇವು ಆವಾಗ ಅವರು ಹಿಂಬರಹವನ್ನು ನೀಡಿದರು ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ದಾವಾದ ಆಸ್ತಿಯ ಮೇಲೆ ನಮ್ಮಗೆ ಯಾವುದೇ ರೀತಿಯ ಹಕ್ಕು ಮತ್ತು ಹಿತಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾದ ಆಸ್ತಿಯ ಮೇಲೆ ನಾವು ಹಕ್ಕು ಮತ್ತು ಹಿತಸಕ್ತಿ ಹೊಂದಿರುತ್ತೇವೆ ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. 2 ಮತ್ತು 3 ನೇ ಪ್ರತಿವಾದಿಯರು ದಾವಾದ ಆಸ್ತಿಯ ಮಾಲೀಕರು ಮತ್ತು ಕಬ್ಜೆದಾರರು ಆಗಿರುತ್ತಾರೆ ಎಂದರೆ ಸರಿಯಲ್ಲ. 2 ಮತ್ತು 3 ನೇ ಪ್ರತಿವಾದಿಯರು ದಾವಾದ ಆಸ್ತಿಯನ್ನು ಮಾರಾಟ ಮಾಡುತ್ತಿದ್ದಾರೆ ಎಂದು ನಾನು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ದಾವೆಯನ್ನು ಸಲ್ಲಿಸಲು ಯಾವುದೇ ಕಾರಣ ನಮ್ಮಗೆ ಉಂಟಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಸುಳ್ಳು ದಾವಾ ಕಾರಣವನ್ನು ತೋರಿಸಿರುತ್ತೇವೆ ಎಂದರೆ ಸರಿಯಲ್ಲ. ನಾವು ಹಾಗೂ 1 ನೇ ಪ್ರತಿವಾದಿ ಮಿಲಪೇಯಾಗಿ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

ಈ ದಾವೆಯನ್ನು ಸಲ್ಲಿಸುವುದಕ್ಕಿಂತ ಪೂರ್ವದಲ್ಲಿ ಹುಸೇನ್‌ಬೀ ಎಂಬುವವರು ಈ ದಾವಾದ ಆಸ್ತಿಗೆ ತಾನೇ ಮಾಲೀಕಳಾಗಿರುತ್ತಾಳೆ ಎಂದು ಹೇಳಿ ದಾವೆಯನ್ನು ಹೆಚ್ಚುವರಿ ಸಿವಿಲ್

ನ್ಯಾಯಾಲಯ, ಯಾದಗಿರಿಯಲ್ಲಿ ಸಲ್ಲಿಸಿದ್ದಳು ಎಂದರೆ ಸರಿಯಲ್ಲ. ಸದರಿ ದಾವೆಯನ್ನು ಹುಸೇನ್ ಬೀ ರವರು ಹಿಂಪಡೆದುಕೊಂಡರು ಎಂದರೆ ಸರಿಯಲ್ಲ. ದಿನಾಂಕಃ 30.07.2020 ರಲ್ಲಿ ಹುಸೇನಭೀ ರವರು ಸುಳ್ಳು ದಾವೆ ಸಲ್ಲಿಸಿದ ಕಾರಣ ಅವರು ಅದನ್ನು ಹಿಂಪಡೆದುಕೊಂಡರು ಎಂದರೆ ಸರಿಯಲ್ಲ. ಹೊಸ ಕಾರಣಗಳನ್ನು ನೀಡಿ ಈ ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಮೀರನಸಾಬ್ ತಂದೆ ಬಾಡೇಸಾಬ್ ಪಿಂಜರ್ ಸಾಃ ಸಂಬ್ರ ಗ್ರಾಮದವರು ದಾವಾ ಆಸ್ತಿಯ ಸಂಪೂರ್ಣ ಮಾಲೀಕ ಮತ್ತು ಕಬ್ಜೆದಾರ ಆಗಿದ್ದ ಎಂದರೆ ಸರಿ. ಮೀರನಸಾಬ್ ತಂದೆ ಬಾಡೇಸಾಬ್ ಪಿಂಜರ್ ರವರು ದಾವಾ ಆಸ್ತಿಯ ಪಹಣಿ ಪತ್ರಿಕೆಯಲ್ಲಿ ಮಾಲೀಕ ಮತ್ತು ಕಬ್ಜೆದಾರ ಎಂದು ದಾಖಲು ಇತ್ತು ಎಂದರೆ ಸರಿ.

ಕಳೆದ 60 ವರ್ಷಗಳ ಹಿಂದೆ ಮೀರನಸಾಬ್ ತಂದೆ ಬಾಡೇಸಾಬ್ ರವರು ತನ್ನ ಕುಟುಂಬದ ಅಡಚಡಣೆಯ ಸಲುವಾಗಿ 2 ಪ್ರತಿವಾದಿ ಮತ್ತು 3 ನೇ ಪ್ರತಿವಾದಿಯರ ಮಾವನಾದ ಹಣಮಂತ ರವರಿಗೆ ಸದಾಕಾಗದ ಮುಖಾಂತರ ದಾವಾ ಆಸ್ತಿಯನ್ನು ಮಾರಾಟ ಮಾಡಿ ಅವರ ಕಡೆಯಿಂದ ಸಂಪೂರ್ಣ ಹಣವನ್ನು ಪಡೆದುಕೊಂಡು ದಾವಾ ಆಸ್ತಿಯ ಕಬ್ಜೆಯನ್ನು ಅವರಿಗೆ ಕೊಟ್ಟಿದ್ದನ್ನು ಎಂದರೆ ಸರಿಯಲ್ಲ. ಮೀರನಸಾಬ್ ತಂದೆ ಬಾಡೇ ಸಾಬ್ ಮಾರಾಟ ಮಾಡಿದ ಬಗ್ಗೆ ದಾವಾ ಆಸ್ತಿಯ ಪಹಣಿ ಪತ್ರಿಕೆಯ ಕಲಂ ನಂಃ 10 ರಲ್ಲಿ ನಮೂದು ಇರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ದಾವಾ ಆಸ್ತಿಯ ಪಹಣಿ ಪತ್ರಿಕೆ ಕಲಂ ನಂಃ 9 ಮತ್ತು 12 ರಲ್ಲಿ 2 ಪ್ರತಿವಾದಿ ಮತ್ತು 3 ನೇ ಪ್ರತಿವಾದಿಯರ ಮಾವನಾದ ಹಣಮಂತ ಹೆಸರುಗಳು ದಾಖಲು ಇರುತ್ತವೆ ಎಂದರೆ ಸರಿಯಲ್ಲ. ಹಣಮಂತ ಜೀವಂತ ಇರುವಾಗ ಆತನೇ ದಾವಾದ ಆಸ್ತಿಯ ಮಾಲೀಕ ಮತ್ತು ಕಬ್ಜೆದಾರನು ಆಗಿದ್ದನ್ನು ಎಂದರೆ ಸರಿಯಲ್ಲ. ಹಣಮಂತನ ಹೆಸರು ದಾವಾದ ಆಸ್ತಿಯಲ್ಲಿ ದಾಖಲು ಇದ್ದ ಬಗ್ಗೆ ಮೀರನಸಾಬ್ ಸಹ ಗೊತ್ತಿತ್ತು ಎಂದರೆ ಸರಿಯಲ್ಲ. ಹಣಮಂತನು ಮೃತಪಟ್ಟು 45-46 ವರ್ಷಗಳು ಆಗಿರುತ್ತವೆ ಎಂದರೆ ಸಾಕ್ಷಿಯು 20 ವರ್ಷಗಳು ಆಗಿರುತ್ತವೆ ಎಂದು ಹೇಳುತ್ತಾರೆ. ಹಣಮಂತ ಮೃತಪಟ್ಟ ನಂತರ ಆತನಿಗೆ 2 ಮತ್ತು 3 ನೇ ಪ್ರತಿವಾದಿಯ ಗಂಡನಾದ ಸಣ್ಣ ತಿಪ್ಪಯ್ಯ ರವರು ವಾರಸುದಾರರು ಇರುತ್ತಾರೆ ಎಂದರೆ ಸರಿ. ದಿನಾಂಕಃ 20.03.1976 ರಲ್ಲಿ ದೊಡ್ಡ ತಿಪ್ಪಯ್ಯ ಮತ್ತು ಸಣ್ಣ ತಿಪ್ಪಯ್ಯ ರವರ ಹೆಸರಿನಲ್ಲಿ ದಾವಾ ಆಸ್ತಿಯು ದಾಖಲು ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿಯವರ ಜಂಟಿ ಹೆಸರುಗಳು 1982-

83 ರ ಪಹಣಿ ಪತ್ರಿಕೆಯಲ್ಲಿ ದಾಖಲು ಇದ್ದವು ಎಂದರೆ ಸರಿಯಲ್ಲ. ದೊಡ್ಡ ತಿಪ್ಪಯ್ಯ ಮತ್ತು ಸಣ್ಣ ತಿಪ್ಪಯ್ಯ ರವರು ಸೇರಿ ದಾವಾ ಆಸ್ತಿಯಲ್ಲಿ ಭಾಗ ಮಾಡಿಕೊಂಡರು ಎಂದರೆ ಸರಿಯಲ್ಲ. ಇವರ ಇಬ್ಬರ ಹೆಸರುಗಳು ಪ್ರತ್ಯೇಕವಾಗಿ ದಾಖಲು ಆದ್ದವು ಎಂದರೆ ಸರಿಯಲ್ಲ. ಸರ್ವೆ ನಂಃ 118 ಅ ನೇದ್ದರಲ್ಲಿ ಇರುವ ಜಮೀನು ಸಣ್ಣ ತಿಪ್ಪಯ್ಯ ರವರ ಹೆಸರಿನಲ್ಲಿ ದಾಖಲು ಆಗಿತ್ತು ಎಂದರೆ ಸರಿಯಲ್ಲ. ಸರ್ವೆ ನಂಃ 118 ಆ ನೇದ್ದರಲ್ಲಿ ಇರುವ ಜಮೀನು ದೊಡ್ಡ ತಿಪ್ಪಯ್ಯ ರವರ ಹೆಸರಿನಲ್ಲಿ ದಾಖಲು ಆಗಿತ್ತು ಎಂದರೆ ಸರಿಯಲ್ಲ. ಸಣ್ಣ ತಿಪ್ಪಯ್ಯ ಮೃತಪಟ್ಟ ನಂತರ ಆತನ ಹೆಂಡತಿಯಾದ 3 ನೇ ಪ್ರತಿವಾದಿಯ ಹೆಸರಿನಲ್ಲಿ ಸರ್ವೆ ನಂಃ 118 ಅ ನೇದ್ದರಲ್ಲಿ ಇರುವ ಜಮೀನು ದಾಖಲು ಆಯಿತು ಎಂದರೆ ಸರಿಯಲ್ಲ. ಪಹಣಿ ಪತ್ರಿಕೆಯಲ್ಲಿ ಇರುವ ಜಮೀನನ್ನು ಒಟ್ಟು ಗುಡಿಸಿದ್ದಾಗ ಒಂದೇ ಪಹಣಿ ಪತ್ರಿಕೆಯಲ್ಲಿ ಇಬ್ಬರ ಹೆಸರುಗಳು ತೋರಿಸಿರುತ್ತಾರೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯು ಮಾಲೀಕಳು ಮತ್ತು ಕಬ್ಜೆದಾರು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮಗೆ ದಾವಾ ಆಸ್ತಿಯಲ್ಲಿ ಪಾಲು ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. 60 ವರ್ಷಗಳಿಂದ ಸಣ್ಣ ತಿಪ್ಪಯ್ಯ ಮತ್ತು ದೊಡ್ಡ ತಿಪ್ಪಯ್ಯ ರವರು ದಾವಾ ಆಸ್ತಿಗೆ ಮಾಲೀಕರು ಮತ್ತು ಕಬ್ಜೆದಾರರು ಆಗಿರುವ ಕಾರಣ ನಮ್ಮಗೆ ಪಾಲು ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾದ ಆಸ್ತಿಯ ಮಾರುಕಟ್ಟೆ ಬೆಲೆ ಹೆಚ್ಚಾಗಿರುವ ಕಾರಣ ಪ್ರತಿವಾದಿಯರ ಕಡೆಯಿಂದ ಹೆಚ್ಚಿನ ಹಣವನ್ನು ಪಡೆಯುವ ಸಲುವಾಗಿ ಅವರ ವಿರುದ್ದ ನಾವು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾದ ಆಸ್ತಿಯಲ್ಲಿ ನಮ್ಮಗೆ ಯಾವುದೇ ಹಿಸ್ಸೆ ಇರುವುದಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ **1 ನೇ ಪ್ರತಿವಾದಿ ಪರ ವಕೀಲರಾದ ಶ್ರೀ.ಎಸ್.ಎಸ್.ಸಿ. ರವರಿಂದಃ**

1 ನೇ ಪ್ರತಿವಾದಿ ಪರ ವಕೀಲರನ್ನು ಕರೆಯಿಸಲಾಯಿತು ಅವರು ಗೈರು ಹಾಜರು ಇರುತ್ತಾರೆ ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.
ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮುಖಾಂತರ ಬೆರಳಚ್ಚುಗಾರಳಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಯಾದಗಿರಿ